Reg. No. | | | | | | | | | |

**BCAKALN 301**

# III Semester B.C.A. Degree Examination, February/March 2023
## (NEP 2020) (2022-23 Batch Onwards) (AECC)
## KANNADA

Time : 2 Hours Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಹರಿಶ್ಚಂದ್ರ ಸತ್ಯವಂತ ಎನ್ನುವ ವಶಿಷ್ಠರ ಮಾತಿಗೆ ವಿಶ್ವಾಮಿತ್ರನು ಆತನ ಸತ್ವ ಪರೀಕ್ಷೆಗೆ ಮುಂದಾಗುವ ಸನ್ನಿವೇಶವನ್ನು ಕುರಿತು ಬರೆಯಿರಿ.

**ಅಥವಾ**

ದಿಟ ಭಕ್ತಿ ಹಾಗೂ ಗುರುವಿನ ಮಹತ್ವವನ್ನು ಅಂಬಿಗರ ಚೌಡಯ್ಯನ ವಚನಗಳ ಹಿನ್ನೆಲೆಯಲ್ಲಿ ವಿವರಿಸಿರಿ.

2) ಸ್ವಂತ ಮನೆ ಇಲ್ಲದ ಸಾಮಾನ್ಯ ವರ್ಗದ ಜನರ ಬವಣೆ 'ಬಾಡಿಗೆ ಮನೆ' ಲೇಖನದಲ್ಲಿ ಹೇಗೆ ಹೊರ ಹೊಮ್ಮಿದೆ ವಿವರಿಸಿರಿ.

**ಅಥವಾ**

'ಬದುಕು ರಿಪೇರಿಯನ್ನು ಬಯಸುತ್ತಲೇ ಇರುತ್ತದೆ' ಎನ್ನುವ ಮಾತನ್ನು 'ರಿಪೇರಿ' ಲೇಖನದ ಹಿನ್ನೆಲೆಯಲ್ಲಿ ವಿವರಿಸಿರಿ.

3) ಸುಬ್ಬಣ್ಣ ಬದುಕನ್ನು ಸರಳವಾಗಿ ಬದುಕಿ ತೋರಿಸಿ ಸಮಾಜಕ್ಕೆ ಆದರ್ಶ ಪ್ರಾಯರಾಗಿ ನಿಂತ ಬಗೆಯನ್ನು ವಿವರಿಸಿರಿ.

**ಅಥವಾ**

ಸುಬ್ಬಣ್ಣನವರು ಹೆಂಡತಿ ಮಗನೊಂದಿಗೆ ಮನೆಯನ್ನು ತೊರೆಯಲು ಕಾರಣವೇನು ? ವಿವರಿಸಿರಿ.

II. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) 'ಗೋವಿನ ಹಾಡು' ಜನಪದ ಗೀತೆಯ ಸ್ವಾರಸ್ಯವನ್ನು ಬರೆಯಿರಿ.

**ಅಥವಾ**

ಚೆನ್ನವೀರ ಕಣವಿಯವರ 'ದೀಪದಾರಿ' ಕವನದ ಆಶಯವೇನು ?

2) 'ಸುಸ್ಥಿರ ಬದುಕನ್ನು ಕಟ್ಟಿಕೊಳ್ಳುವಲ್ಲಿ ಕೃಷಿ ಸಂಸ್ಕೃತಿ ಪ್ರಧಾನ ಪಾತ್ರವನ್ನು ವಹಿಸುತ್ತದೆ' ಎಂಬುದನ್ನು ನರೇಂದ್ರ ರೈ ದೇರ್ಲ ಅವರ ಲೇಖನದ ಆಧಾರದ ಮೇಲೆ ವಿವರಿಸಿರಿ.

**ಅಥವಾ**

'ನಾನು ಕೊಂದ ಹುಡುಗಿ' ಕಥೆಯ ಆಶಯವನ್ನು ಬರೆಯಿರಿ.

3) ಸುಬ್ಬಣ್ಣನವರ ದಾಂಪತ್ಯ ಜೀವನ ಕುರಿತು ಬರೆಯಿರಿ.

**ಅಥವಾ**

ಮೈಸೂರು ಬಿಟ್ಟು ದೂರದ ಕಲ್ಕತ್ತೆಯಲ್ಲಿ ನೆಲೆಸಿದ ಸುಬ್ಬಣ್ಣ ಎದುರಿಸಿದ ಸಮಸ್ಯೆಗಳನ್ನು ವಿವರಿಸಿರಿ.

III. ಕೆಳಗಿನ **ಒಂದು** ಪದ್ಯ ಭಾಗದ ಸಂದರ್ಭ ಸೂಚಿಸಿ ಭಾವಾರ್ಥವನ್ನು ಬರೆಯಿರಿ. **(1×5=5)**

ಕ್ಷಮಿಸು, ನಿನ್ನನ್ನು ನಿನ್ನ ತತ್ವಗಳನ್ನು
ಗಾಳೀ ಪಟ ಮಾಡಿ ಆಡಿ ಕಳೆದುಕೊಂಡಿದ್ದೇವೆ
ಯಾವ ಗಾಳಿಯ ಗರ್ಭ ಸೇರಿ ಅವು ಎಲ್ಲಾ
ದಿಕ್ಕಾಪಾಲಾಗಿ ಚಿಪ್ಪಾಡಿ ಹರಕಾಗಿ ಹೋದುವೊ
ಈಗೆಲ್ಲಿ ಹುಡುಕೋಣ ಮಾರಾಯ....
ಹೋಗಲಿ ಬಿಡು....

**ಅಥವಾ**

ಅರ್ಚನೆಯ ಮಾಡುವಲ್ಲಿ ವೇಷವರಿತಿರಬೇಕು
ಪೂಜೆಯ ಮಾಡುವಲ್ಲಿ ಪುಣ್ಯ ಮೂರ್ತಿಯಾಗಿರಬೇಕು
ಕೊಳು–ಕೊಡೆಯಲ್ಲಿ ಭೂತ ಹಿತವಾಗಿರಬೇಕು
ಇಂತೀ ಸಡಗರಿಸಿಕೊಂಡಿಪ್ಪಾತನಡಿಗೆರಗುವೆನೆಂದಾತ
ಅಂಬಿಗರ ಚೌಡಯ್ಯ

IV. **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(2×4=8)**

1) 'ಕುಲವ ನಾಲಗೆಯಱಿಹಿತೆಂಬ ನಾಣ್ನುಡಿ'
2) ಕುರುಡ ಕುರುಡನ ಕೈಯ್ಯ ಪಿಡಿದು ಪಥವ ನಡೆಯಬಲ್ಲರೇ ?
3) 'ನಿನ್ನ ಹರಣದ್ಧರಣಕ್ಕೆ ಮತ್ತೆ ಬಂದಿದ್ದೇನೆ '
4) ನಿನ್ನ ಭೀಮ ಶಕ್ತಿ ನೀಡು ನಮ್ಮ ಜನತೆಯನೆತ್ತಲು

V. ಒಂದು ಪದ ಅಥವಾ ವಾಕ್ಯದಲ್ಲಿ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ. (8×1=8)

1) 'ಉಭಯ ಕವಿ ಕಮಲ ರವಿ' ಯಾರು ?

2) ಅಂಬಿಗರ ಚೌಡಯ್ಯ ಪ್ರವೃತ್ತಿಯಲ್ಲಿ ಅನುಭಾವಿ ವೃತ್ತಿಯಲ್ಲಿ ಏನಾಗಿದ್ದರು ?

3) 'ಚೆಂಬೆಳಕಿನ ಕವಿ' ಎಂದು ಯಾರನ್ನು ಕರೆಯುತ್ತಾರೆ ?

4) 'ರಾಘವ' ಕಾವ್ಯನಾಮದಿಂದ ಪ್ರಸಿದ್ಧರಾದ ಲೇಖಕರು ಯಾರು ?

5) 'ನಾನು ಕೊಂದ ಹುಡುಗಿ' ಕಥೆಯನ್ನು ಬರೆದವರು ಯಾರು ?

6) ನರೇಂದ್ರ ರೈ ದೇರ್ಲರವರ ಯಾವ ಕೃತಿಗೆ ಹಾ.ಮಾ. ನಾಯಕ ಅಂಕಣ ಪ್ರಶಸ್ತಿ ಬಂದಿದೆ ?

7) 'ಸಣ್ಣ ಕಥೆಗಳ ಜನಕ' ಎಂದು ಯಾರನ್ನು ಕರೆಯುತ್ತಾರೆ ?

8) ಸುಬ್ಬಣ್ಣನವರ ಹೆಂಡತಿಯ ಹೆಸರೇನು ?

Reg. No. | | | | | | | | | |

# BASKALN 301/HRDKALN 301/BSWKALN 301/BVAKALN 301

## III Semester B.A./B.A.(HRD)/B.S.W./B.V.A. Examination, February/March 2023
## (NEP – 2020) (2022 – 23 Batch Onwards)
## KANNADA LANGUAGE

Time : 2 Hours  Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ಚಂದ್ರಮತಿಯ ಪತಿನಿಷ್ಠೆ ಹಾಗೂ ಸ್ವಾಮಿನಿಷ್ಠೆಯು ರಾಘವಾಂಕನ ಕಾವ್ಯಭಾಗದಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ.

**ಅಥವಾ**

ಏಸುವನ್ನು ಶಿಲುಬೆಗೇರಿಸುವ ಸಂದರ್ಭವು 'ಗೊಲ್ಗೊಥಾ' ಕಾವ್ಯಭಾಗದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.

2) ಮನೆಯವರೆಗೆ ಹಾದಿ ಮಾಡಲು ವಾಸ್ತೇವನು ಪಟ್ಟಂತಹ ಶ್ರಮ ಹಾಗೂ ಅದರಿಂದ ಎದುರಾದ ಸವಾಲುಗಳನ್ನು ವಿವರಿಸಿರಿ.

**ಅಥವಾ**

'ತಾಯಿಯ ಆಸೆ' ಲೇಖನದಲ್ಲಿ ಮಗಳ ಮಾನಸಿಕ ತೊಳಲಾಟ ಹಾಗೂ ಅದರಿಂದ ಆಕೆಯು ಹೊರಬರಲು ಸಾಧ್ಯವಾದ ಸನ್ನಿವೇಶದ ಕುರಿತು ವಿವರಿಸಿರಿ.

3) ರಾವಣನು ಸ್ವಪ್ನದಲ್ಲಿ ಕಂಡ ಸೀತೆಯ ಕುರಿತು ಬರೆಯಿರಿ.

**ಅಥವಾ**

ರಾವಣನ ಮನಸ್ಸು ಪರಿವರ್ತನೆಗೊಂಡ ಹಿನ್ನೆಲೆಯನ್ನು ವಿವರಿಸಿರಿ.

II. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ : **(3×5=15)**

1) ರತ್ನಾಕರವರ್ಣಿಯು ಸೂಚಿಸಿದ ದೇಹ, ಆತ್ಮ ಮತ್ತು ಪರಮಾತ್ಮಗಳ ಕುರಿತಾದ ವಿಚಾರಗಳನ್ನು ವಿವೇಚಿಸಿರಿ.

**ಅಥವಾ**

'ಕರ್ಫ್ಯೂ' ಕವನದ ಆಶಯವನ್ನು ವಿವರಿಸಿರಿ.

P.T.O.

2) ಭಾವಚಿತ್ರಗಳು ಜನರ ಮನೋಲೋಕವನ್ನು ವಿಸ್ತರಿಸುವ ಎಳೆಗಳಂತೆ ಕಾರ್ಯನಿರ್ವಹಿಸುತ್ತವೆ ಎಂಬ ವಿಚಾರವು ಲೇಖನದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.

**ಅಥವಾ**

ಅಸಲಿ–ನಕಲಿ, ಅಸ್ಮಿತೆ, ಕುಂಭದ್ರೋಣ – ಈ ಪದಗಳ ವೈಶಿಷ್ಟ್ಯಗಳ ಕುರಿತಾಗಿ ಪ್ರೊ. ವೆಂಕಟಸುಬ್ಬಯ್ಯ ಅವರ ಅಭಿಪ್ರಾಯಗಳನ್ನು ಬರೆಯಿರಿ.

3) ರಾವಣ–ಮಂಡೋದರಿಯರ ಬಾಂಧವ್ಯವು 'ದಶಾನನ ಸ್ವಪ್ನ ಸಿದ್ಧಿ' ಕಾವ್ಯಭಾಗದಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ.

**ಅಥವಾ**

'ದಶಾನನ ಸ್ವಪ್ನ ಸಿದ್ಧಿ ' ಕಾವ್ಯಭಾಗದಲ್ಲಿ ಕುವೆಂಪು ಅವರ ಆಶಯವು ಹೇಗೆ ಪ್ರಕಟಗೊಂಡಿದೆ ? ವಿವರಿಸಿರಿ.

III. ಕೆಳಗಿನ ಒಂದು ಪದ್ಯಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(1×5=5)**

1) ಎನ್ನ ದುಷ್ಕರ್ಮ ವಶದಿಂದಾದ ಕರ್ಮವೆಂ
ದಿನ್ನೆಗಂ ಬಗೆದೆತಾನಿಂದುತನಕಂ ಕಡೆಗೆ
ನಿನ್ನ ಗೊಡ್ಡಾಟವೇ ಹೊಲೆಯನಾದವನಿನ್ನು
ಸತಿಗಿತಿಯ ಕೊಲೆಗೆ ಹೇಸಿ
ಬೆನ್ನೀವನೇ ಇದಂ ತೋಱ ಸಿಕ್ಕಿಸಿಬಂದ
ಗನ್ನಗತಕಕ್ಕೆ ಸೆಡೆವೆನೆ ಸಡಿಫಡೆನುತಾರ್ದು
ನನ್ನಿಕಾಱಂ ವಧುವನೆಲೆಲೆ ಶಿವಶಿವ
ಮಹಾದೇವ ಹೊಡೆದಂ ಹೊಡೆದನು

2) ನಿಮ್ಮಪ್ಪನ್ಹಾಂಗ ನಾ ಸೋಗು ಮಾಡಿ
ಜೋಗಪ್ಪನಾಗಲೇನ
ಹಾಸಿದಷ್ಟರಲೆ ಕಾಲು ಚಾಚಿ ನೀ
ಬಾಳಲಾರಿಯೇನ

IV. ಕೆಳಗಿನವುಗಳಲ್ಲಿ ಎರಡರ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(2×4=8)**

1) ಅನ್ಯರಂ ರಕ್ಷಿಸಿದಿವಂ ತನ್ನ ತಾನೆ ರಕ್ಷಿಸಲಾರನಾದನೆ ?

2) ಸುಜ್ಞಾನದಿಂ ಪೊಳ್ದಿರ್ಪಂ ಶಿವನಾಗಿಯೇ ಚದುರನೋ !

3) ಹರೆಯದ ಹುಡುಗಿ ನುಡಿಸುತಿರೆ ಪಂಥವಾಡದ ಜವ್ವನಿಗನುಂಟೆ.

4) ಬಾಯಿಲ್ಲದವನ ಕೂಗಿಗೆ ಕಂಚಿನ ಕಂಠ ಎರವಲು ಸಿಕ್ಕಿದೆ.

V. ಕೆಳಗಿನ ಪ್ರಶ್ನೆಗಳಿಗೆ ವಾಕ್ಯರೂಪದಲ್ಲಿ ಉತ್ತರಿಸಿರಿ : **(8×1=8)**

1) ರಾಘವಾಂಕನಿಗಿರುವ ಬಿರುದು ಯಾವುದು ?

2) ರತ್ನಾಕರವರ್ಣಿಯು ಸಾಂಗತ್ಯದಲ್ಲಿ ಬರೆದಿರುವ ಕೃತಿ ಯಾವುದು ?

3) ಮಾಸ್ತಿಯವರ ಕಾವ್ಯನಾಮ ಯಾವುದು ?

4) ವೈದೇಹಿಯವರ ಮೂಲ ಹೆಸರೇನು ?

5) 'ಮನಸ್ಸು ಇಲ್ಲದ ಮಾರ್ಗ' ಕೃತಿಯ ಕರ್ತೃ ಯಾರು ?

6) 'ಇರಾದೆ' ಎನ್ನುವುದು ಯಾವ ಭಾಷೆಯಿಂದ ಬಂದ ಪದವಾಗಿದೆ ?

7) ಕುವೆಂಪು ಅವರು ಬರೆದಿರುವ ಒಂದು ಕಾದಂಬರಿಯನ್ನು ಹೆಸರಿಸಿರಿ.

8) ಮೈಥಿಲಿ ಎಂದರೆ ಯಾರು ?

Reg. No. | | | | | | | | | |

**BBAKALN 301**

# III Semester B.B.A. Degree Examination, February/March 2023
## (NEP 2020) (2022-23 Batch Onwards)
## KANNADA LANGUAGE (AECC)

Time : 2 Hours                                                                 Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ಅನ್ಯರ ಮನೆಯ ತೊತ್ತಾಗಿ ಬದುಕಿದ ಚಂದ್ರಮತಿ ಮಗನನ್ನು ಕಳೆದುಕೊಂಡು ದುಃಖಿಸುವ ಸನ್ನಿವೇಶದ ಕುರಿತು ಬರೆಯಿರಿ.

**ಅಥವಾ**

'ಇದು ಮೊದಲು' ಕವನದ ವಸ್ತು ಮತ್ತು ಆಶಯವನ್ನು ವಿವರಿಸಿರಿ.

2) ಭೂತಕಟ್ಟುವ ಸಮುದಾಯಗಳ ಸಾಮಾಜಿಕ ಬದುಕು 'ಮಾಟ' ಕಥೆಯಲ್ಲಿ ಅನಾವರಣಗೊಂಡ ಬಗೆಯನ್ನು ವಿವರಿಸಿರಿ.

**ಅಥವಾ**

ಕೊಡವರ ಧಾರ್ಮಿಕ ನಂಬಿಕೆಗಳನ್ನು ಕುರಿತು ಬರೆಯಿರಿ.

3) ಸಾಮಾಜಿಕ ಅಸಮತೋಲನ ಮತ್ತು ಬಡತನದ ತೀವ್ರತೆಯನ್ನು ಕಾದಂಬರಿ ಗುರುತಿಸಿದ ಪರಿಯನ್ನು ವಿವರಿಸಿ.

**ಅಥವಾ**

ಇಲಾಖಾ ಅಧಿಕಾರಿಗಳ ಮತ್ತು ಜಮೀನ್ದಾರರ ಶೋಷಣೆಯ ಹಲವು ಮುಖಗಳನ್ನು ಕಾದಂಬರಿ ಹೇಗೆ ಪ್ರತಿನಿಧಿಸುತ್ತದೆ ? ವಿವರಿಸಿ.

II. ಕೆಳಗಿನ ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(3×5=15)**

1) 'ಬೇವು ಬೆಲ್ಲದೊಳಿಡಲೇನು ಫಲ' – ಕೀರ್ತನೆಯ ಆಶಯವನ್ನು ವಿವರಿಸಿ.

**ಅಥವಾ**

ನಾಡು-ನುಡಿಗೆ ಮಾರಕವಾಗುವ ಸಂಗತಿಗಳು ಯಾವುವು ? 'ಕನ್ನಡದ ಮಾತು' ಕವನದ ಆಧಾರದಿಂದ ವಿವರಿಸಿರಿ.

P.T.O.

2) ತುಳುನಾಡಿನ ಧರ್ಮ ಸಮನ್ವಯತೆಯ ಸ್ವರೂಪ ಮತ್ತು ಅದರ ಮಹತ್ವವನ್ನು ಕುರಿತು ಚರ್ಚಿಸಿರಿ.

**ಅಥವಾ**

ನೀರಿನ ಅಪವ್ಯಯಕ್ಕೆ ಕಾರಣವಾಗುವ ಸಂಗತಿಗಳ ಕುರಿತು ಚರ್ಚಿಸಿರಿ.

3) ದುರ್ಗೋಜಿಯ ಪಾತ್ರ ಪರಿಚಯ ಮಾಡಿ ಕೊಡಿರಿ.

**ಅಥವಾ**

ರೈತ ಮಕ್ಕಳ ಮೇಲಿನ ಶೋಷಣೆಯನ್ನು ಕಾದಂಬರಿ ಚಿತ್ರಿಸಿದ ಬಗೆಯನ್ನು ವಿವರಿಸಿರಿ.

III. ಕೆಳಗಿನ **ಒಂದು** ಪದ್ಯಭಾಗದ ಸಂದರ್ಭ ಸ್ವಾರಸ್ಯವನ್ನು ವಿವರಿಸಿ : **(1×5=5)**

ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಬಾರದು
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ

**ಅಥವಾ**

ನಮ್ಮ ಅಣ್ಣಾನ ಹೆಂಡತಿ ಕೇಡಿ
ಕಣ್‌ಸನ್ನೆ ಮಾಡಿದಳೆನ್ನ ನೋಡಿ
ಅಣ್ಣ ಮಾತಾಡಿಸದೆ ಒಳಗೋಡಿದ
ತನ್ನ ಸಿರಿಯಲ್ಲಿ ತಾನೊಡಗೂಡಿದ

IV. ಕೆಳಗಿನ **ಎರಡು** ಸಾಲುಗಳ ಸಂದರ್ಭ ಸ್ವಾರಸ್ಯವನ್ನು ಬರೆಯಿರಿ : **(2×4=8)**

1) ಹೀನ ಕೃತ್ಯಗಳ ಮಾಡುತ ನದಿಯಲಿ ಸ್ನಾನವ ಮಾಡಿದರೇನು ಫಲ

2) ಮುತ್ತಿನಂತೆ ಜೋಪಾನವಾಗಿ ಬಾಳಿದೆ

3) ನಿನ್ನ ಮಾತಿಗೆ ಮರುಳು ನೊಣ ನಾನು ಈವರೆಗೆ

4) ವಿಜಯಪತಾಕೆಯ ಕೆಳಗೆ ನರಳುತ್ತಿವೆ ವಿಜಯ ಘೋಷಗಳು.

V. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ : (8×1=8)

1) 'ಅಂದಣ' ಪದದ ಅರ್ಥವೇನು ?

2) 'ಹರಿಶ್ಚಂದ್ರ ಕಾವ್ಯ'ದ ಛಂದಸ್ಸು ಯಾವುದು ?

3) ಪುರಂದರದಾಸರ ಗುರುಗಳು ಯಾರು ?

4) 'ಕನ್ನಡದ ಕಣ್ವ' ಯಾರು ?

5) ತುಳುವಿನ 'ಅಜಲ್' ಎಂಬುದಕ್ಕೆ ಸಂವಾದಿಯಾದ ಕನ್ನಡ ಪದ ಯಾವುದು ?

6) 'ಆಯನ' ಯಾರ ಅಭಿನಂದನ ಗ್ರಂಥ ?

7) ಕನ್ನ ಯಾರ ಮಗ ?

8) ತಿರುಗೋಡಿನ ಜಮೀನ್ದಾರ ಯಾರು ?

---

Reg. No. | | | | | | | | | |

# BSCKALN 301/FNDKALN 301/BSAKALN 301/ BFTKALN 301/BHSKALN 301/BFDKALN 301/ BIDKALN 301/BSHKALN 301

## III Semester B.Sc./B.Sc.(FND)/B.Sc. (A & VE)/B.Sc.(FT)/B.Sc. (Home Science)/B.Sc.(FD)/B.Sc.(ID&D)/B.Sc.(HS) Examination, February/March 2023 (2022-23 Batch Onwards) (NEP 2020) KANNADA Kannada Language (AECC)

Time : 2 Hours Max. Marks : 60

I. ಈ ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ಮಯೂರ ಧ್ವಜನು ದೇಹಾರ್ಥದಾನ ಮಾಡಿದ ಸಂದರ್ಭವನ್ನು ಕವಿ ವರ್ಣಿಸಿದ ಬಗೆಯನ್ನು ವಿವರಿಸಿರಿ.

**ಅಥವಾ**

ಮನುಷ್ಯನ ಬದುಕು ಮಬ್ಬಿನಿಂದ ಮಬ್ಬಿಗೆ ನಡೆಯುವ ಪಯಣ ಎಂಬುದನ್ನು ಕವಿ ಹೇಗೆ ಚಿತ್ರಿಸಿದ್ದಾರೆ ? ವಿವರಿಸಿರಿ.

2) ಹೆಣ್ಣೊಬ್ಬಳ ತ್ಯಾಗ ಬಲಿದಾನದ ಕತೆ 'ನಿಜಗಲ್ಲಿನ ರಾಣಿ' ಕತೆಯಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

**ಅಥವಾ**

ಅಭಿವೃದ್ಧಿಯ ಹೆಸರಿನಲ್ಲಿ ಹಳ್ಳಿಗಳು ಹಾಳಾಗುತ್ತಿರುವ ಆತಂಕವನ್ನು 'ಹಳ್ಳಿ ಹಳ್ಳಿಯಾಗಿ ಉಳಿದಲ್ಲಿ ಉಳಿದೆಲ್ಲ' ಲೇಖನದ ಹಿನ್ನೆಲೆಯೊಂದಿಗೆ ವಿವರಿಸಿರಿ.

3) ಸೀತಾ ಪರಿತ್ಯಾಗದ ಸನ್ನಿವೇಶವು ಜನಪದ ಕಾವ್ಯದಲ್ಲಿ ಮೂಡಿ ಬಂದ ಬಗೆಯನ್ನು ವಿವರಿಸಿರಿ.

**ಅಥವಾ**

ಸೀತೆಯ ಶಿರವನ್ನು ಕತ್ತರಿಸುವಂತೆ ರಾಮನು ಆಜ್ಞಾಪಿಸಲು ಕಾರಣವೇನು ? ಕಾವ್ಯದ ಹಿನ್ನೆಲೆಯಲ್ಲಿ ವಿವರಿಸಿರಿ.

II. ಈ ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ : **(3×5=15)**

1) ಋಣದಿಂದ ತನ್ನನ್ನು ಪಾರುಮಾಡು ಎಂದು ಪುರಂದರದಾಸರು ದೇವರನ್ನು ಹೇಗೆ ಪ್ರಾರ್ಥಿಸಿದ್ದಾರೆ ? ವಿವರಿಸಿರಿ.

**ಅಥವಾ**

'ಶಾನುಭೋಗರ ಮಗಳು' ಕವಿತೆಯ ಸ್ವಾರಸ್ಯವನ್ನು ಬರೆಯಿರಿ.

2) ಡಾ. ಸುದರ್ಶನ್‌ರ ಆದರ್ಶವೆಂತಹುದು ಎಂಬುದನ್ನು ಲೇಖನದ ಹಿನ್ನೆಲೆಯಲ್ಲಿ ವಿವರಿಸಿರಿ.

**ಅಥವಾ**

ಕನ್ನಡ ವೆಬ್ ಸೈಟ್, ಲಿಪಿ ತಂತ್ರಾಂಶಗಳ ಕುರಿತು ವಿವರಿಸಿರಿ.

3) ಹುಣಸೇಕಾಯಿ ವೃತ್ತಾಂತದಲ್ಲಿ ಮೂಡಿದ ಗ್ರಾಮೀಣ ಜೀವನದ ನೈಜ ಚಿತ್ರವನ್ನು ನಿರೂಪಿಸಿರಿ.

**ಅಥವಾ**

ಜನಪದ ಕಾವ್ಯದಲ್ಲಿ 'ಕುಶ್ಚಲು ಅವುಲು' ಪ್ರಸಂಗದ ಸ್ವಾರಸ್ಯವನ್ನು ಬರೆಯಿರಿ.

III. ಈ ಕೆಳಗಿನ ಪದ್ಯಗಳಲ್ಲಿ **ಒಂದಕ್ಕೆ** ಸಂದರ್ಭ ಮತ್ತು ಭಾವಾರ್ಥ ಸ್ವಾರಸ್ಯವನ್ನು ವಿವರಿಸಿರಿ : **(1×5=5)**

1) ಪನ್ನಗಾರಿಧ್ವಜಂ ಬಳಿಕಾ ನೃಪಾಲನಂ
ಮನ್ನಿಸಿ ಕೃತಾರ್ಥನಹೆ ನೀನರ್ಥದೇಹಮಂ
ನನ್ನಿಯಿಂದೀಯೆ ಮೆಚ್ಚಿದೆನೀಗ ನಿನಗೆ ಸಂಗ್ರಾಮದೊಳ್ ತಾಮ್ರಕೇತು
ನಿನ್ನ ಪಡೆಯೆಲ್ಲಮುಮನೀ ಸವ್ಯ ಸಾಚಿಯುಮ
ನೆನ್ನುವಂ ಮೂರ್ಛೆಗಾಣಿಸಿ ಕೆಡಹಿ ಬಂದುದಕೆ
ಮುನ್ನೆ ಹರ್ಷಿತನಾದೆನಿನ್ನು ಸತಿಸುತರೊಡನೆ ಮಾಡು ಯಜ್ಞವನೆಂದನು

2) ದಾನವರು ದೇವತೆಗಳಿಂಗಿತವನರಿದು
ಕಿವಿಯಿಂದ ಕಿವಿಗೆ ಕುಟಿಲವ ವಿಷವ ಸುರಿದು
ಬಂಡೆಗಲ್ಲೆದೆಯವರು, ಮೊಸಳೆ ಮೈಯವರು
ಹುಲಿ ತೋಳದೊಡಲು ಕರಗಸದ ಕೈಯವರು

IV. ಎರಡು ಪ್ರಶ್ನೆಗಳಿಗೆ ಸಂದರ್ಭ, ಅರ್ಥ ವಿಶೇಷತೆಗಳನ್ನು ವಿವರಿಸಿರಿ : **(2×4=8)**

1) ಕೀರ್ತಿ ನಿಲ್ವುದು, ನರರ ಬಾಳ್ ದಿಟಮಿದಲ್ಲ.

2) ಚಿತ್ರದಲ್ಲಿ ಕೂಡುವುದು ಕೂಡ ಆ ವಿಧಿಗೆ ಸೇರಲಿಲ್ಲ.

3) ಸಂಜೆ ಬಾನಿನ ತುಂಬ ಹಗಲ ನೆನಪಿನ ಚಿತ್ರ

4) ಬೀಜ ಬಿತ್ತುವ ಒಕ್ಕಲಿಗರಾಗುತ್ತೇವೆ.

V. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : **(8×1=8)**

1) ಲಕ್ಮ್ಮೀಶನ ಜನ್ಮಸ್ಥಳ ಯಾವುದು ?

2) 'ಉತ್ತರ ಮೇಘ' ಕವನದ ಕರ್ತೃ ಯಾರು ?

3) 'ಮೈಸೂರು ಮಲ್ಲಿಗೆ' ರಚನಕಾರರು ಯಾರು ?

4) 'ಹೊಸ ಮಾಧ್ಯಮಗಳು' ಲೇಖನದ ಕರ್ತೃ ಯಾರು ?

5) ನಿಜಗಲ್ಲಿನ ಪ್ರಸಿದ್ಧ ಪಾಳೆಯಗಾರ ಯಾರು ?

6) ಪಾಪು ಎಂದು ಯಾರನ್ನು ಕರೆಯುತ್ತಾರೆ ?

7) ಸೀತೆಗೆ ಆಶ್ರಯ ನೀಡಿದವರಾರು ?

8) ಮಡಿವಾಳ ಮಾಚಪ್ಪನ ಹೆಂಡತಿಯ ಹೆಸರೇನು ?